ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/3272/2019/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:07-09-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: ಎದುರುದಾರರಾದ (1) ರಂಗಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕರಡಹಳ್ಳಿ ಗ್ರಾಮ ಪಂಚಾಯಿತಿ, ನಾಗಮಂಗಲ ತಾಲ್ಲೂಕು ಮತ್ತು (2) ಶ್ರೀ ಸತೀಶ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನಾಗಮಂಗಲ ಇವರ (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀ ಹೆಚ್.ಸಿ. ಪ್ರಕಾಶ್, ಉಲ್ಲಾಳು ಉಪನಗರ ಅಂಚೆ, ಬೆಂಗಳೂರು ಇವರು (ಇನ್ನು ಮುಂದೆ **"ದೂರುದಾರರು"** ಎಂದು ಕರೆಯಲ್ಪಡುತ್ತಾರೆ) ರವರು 1ನೇ ಎದುರುದಾರರಾದ ರಂಗಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕರಡಹಳ್ಳಿ ಗ್ರಾಮ ಪಂಚಾಯಿತಿ, ನಾಗಮಂಗಲ ತಾಲ್ಲೂಕು ಮತ್ತು 2ನೇ ಎದುರುದಾರರಾದ ಶ್ರೀ ಸತೀಶ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನಾಗಮಂಗಲ ಇವರುಗಳ (ಇನ್ನು ಮುಂದೆ ಎದುರುದಾರ 1 ಮತ್ತು 2 ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ಸದರಿ ದೂರಿನಲ್ಲಿ ಪಂಚಾಯಿತಿಗೆ ಸೇರಿದ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ತಿಳಿಸಿದ್ದರೂ ತೆರವುಗೊಳಿಸಿರುವುದಿಲ್ಲವೆಂದು ಈ ಸಂಬಂಧ ದೂರುದಾರರು ಮತ್ತು ಇತರರು ಅಡಿಷಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ನಾಗಮಂಗಲ ಇಲ್ಲಿ ಓ.ಎಸ್. ನಂ.122/2019ರಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯು ಚಾಲ್ತಿಯಲ್ಲಿರುವುದಾಗಿ ತಿಳಿಸಿರುತ್ತಾರೆ.

**3. ಎದುರುದಾರರ ಆಕ್ಷೇಪಣೆ:**

ಎದುರುದಾರರು ಆಕ್ಷೇಪಣೆಯಲ್ಲಿ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಕರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಹುಳ್ಳೇನಹಳ್ಳಿ ಗ್ರಾಮದ ಹೊನ್ನಯ್ಯ ಬಿನ್ ಗಂಟಯ್ಯ ಇವರು ಅಕ್ರಮವಾಗಿ ರಸ್ತೆಯನ್ನು ಒತ್ತುವರಿ

ಮಾಡಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು ಈ ಸಂಬಂಧ ಸದರಿ ಒತ್ತುವರಿಯನ್ನು ತೆರವುಗೊಳಿಸುವಂತೆ ಹೆಚ್.ಸಿ. ಮಾಯಣ್ಣ ಇವರು ದೂರು ಸಲ್ಲಿಸಿದ್ದು, ಸದರಿ ದೂರಿನನ್ವಯ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿ ಕಟ್ಟಡ ಲೈಸೆನ್ಸ್ ಪಡೆದು ನಿರ್ಮಾಣ ಮಾಡುವಂತೆ ದಿನಾಂಕ:09-05-2019ರಂದು ನೋಟೀಸ್ ಜಾರಿ ಮಾಡಿದ್ದು ಅದರಂತೆ, ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಎದುರುದಾರರ ಸಮಕ್ಷಮ ಸ್ಥಳ ಮಹಜರ್ ಮಾಡಿಸಿದ್ದು ಒತುವರಿಯಾಗಿರುವುದನು, ತೆರವುಗೊಳಿಸುವಂತೆ ಸೂಚಿಸಿದ್ದು, ಈ ಸಂಬಂಧ ಮಾಯಣ್ಣ ಮತ್ತು ಇತರರು ಕಟ್ಟಡ ಕಾಮಗಾರಿಯನ್ನು ಮುಂದುವರಿಸದಂತೆ ನಾಗಮಂಗಲ ಸಿವಿಲ್ ನ್ಯಾಯಲಯದಿಂದ ಮೂಲ ದಾವಾ ಸಂಖ್ಯೆ.122/2019ರಲ್ಲಿ ತಡೆಯಾಜ್ಞೆಯನ್ನು ತಂದಿರುವುದಾಗಿ ತಿಳಿಸಿರುತ್ತಾರೆ. ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆ ಪಂಚಾಯಿತಿಯಿಂದ ನೋಟೀಸ್ ನೀಡಿದ್ರೂ ಸಹ ಹೊನ್ನಯ್ಯ ಇವರು ಕಟ್ಟಡ ಕಾಮಗಾರಿಯನ್ನು ನಡೆಸುತ್ತಿದ್ದು, ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ಕೊಟ್ಟು ಎಚ್ಚರಿಕೆ ನೀಡುವಂತೆ ತಿಳಿಸಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ. ಮತ್ತೊಮ್ಮೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಕಾಮಗಾರಿ ಮುಂದುವರೆಸದಂತೆ ಪಂಚಾಯಿತಿಯಿಂದ ನೋಟೀಸ್ ಜಾರಿ ಮಾಡಿರುವುದಾಗಿ ತಿಳಿಸುತ್ತಾರೆ.

ಮುಂದುವರೆದು, ಗಲ್ಲಿ ಜಾಗವನ್ನು ಒತ್ತುವರಿ ಮಾಡಿ ಕಟ್ಟಡ ಕಾಮಗಾರಿಯನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಸದರಿ ಗಲ್ಲಿಯನ್ನು ರಕ್ಷಣೆ ಮಾಡುವುದು ಎದುರುದಾರರ ಕರ್ತವ್ಯವಾಗಿರುವುದರಿಂದ ಸದರಿ ಒತ್ತುವರಿಯ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದು ಎದುರುದಾರರ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರು ಕರ್ತವ್ಯವಾಗಿದ್ದು ಸದರಿ ಪ್ರಕರಣದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಪಕ್ಷಗಾರರನ್ನಾಗಿಸಿಕೊಂಡು ಒತ್ತುವರಿ ಬಗ್ಗೆ ಕಾನೂನು ಪ್ರಕಾರ ಕೈಗೊಂಡ ಕ್ರಮದ ಬಗ್ಗೆ ವರದಿ ಪಡೆಯಲು ಗೌರವಾನ್ವಿತ ಅನುಮತಿ ಪಡೆಯಲಾಗಿರುತ್ತದೆ.

1ನೇ ಎದುರುದಾರರು ದಿನಾಂಕ:26-04-2021ರಂತೆ ವರದಿಯನ್ನು ಸಲ್ಲಿಸಿದ್ದು ಸದರಿ ವರದಿಯಲ್ಲಿ ಒತ್ತುವರಿ ತೆರವುಗೊಳಿಸದೆ ಕಟ್ಟಡ ಕಾಮಗಾರಿಯನ್ನು ಮುಂದುವರಿಸದಂತೆ ನಾಗಮಂಗಲ ಸಿವಿಲ್ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿಯಿರುವುದರಿಂದ ಕ್ರಮ ತೆಗೆದುಕೊಳ್ಳಲು ಕಷ್ಟವಾಗಿರುತ್ತದೆ ಎಂದು ತಿಳಿಸಿರುತ್ತಾರೆ. 2ನೇ ಎದುರುದಾರರಾದ ಕಾರ್ಯನಿರ್ವಾಹಕ ಅದಿಕಾರಿಯವರು ದಿನಾಂಕ:23-07-2021ರಂತೆ 2 ಅಡಿಗಳ ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಲು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಾಧಿಕಾರವುವಾಗಿದ್ದು, ಸದರಿ ಪ್ರಾಧಿಕಾರವು ವಿಚಾರಣೆ ನಡೆಸಿ ಒತ್ತುವರಿ ತೆರವುಗೊಳಿಸುವುದು ಸಮಂಜಸವಾಗಿರುತ್ತದೆ ಎಂದು ಕೋವಿಡ್-19 ಇರುವ ಕಾರಣ ಹಾಗೂ ಕೆಲಸದ ಒತ್ತಡದಿಂದಾಗಿ ವಿಚಾರಣೆ ನಡೆಸಲು ಸಾಧ್ಯವಾಗಿರುವುದಿಲ್ಲವೆಂದು ಹಾಗೂ ಈ ಸಂಬಂಧ 2 ತಿಂಗಳ ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ.

ದಿನಾಂಕ;02-09-2021ರಂದು 2ನೇ ಎದುರುದಾರರು ದಿನಾಂಕ;21-08-2021ರಂದು ಪೊಲೀಸ್ ಸಿಬ್ಬಂದಿಯೊಂದಿಗೆ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಹೋದಾಗ ಹೊನ್ನಯ್ಯ ಮತ್ತು ಕುಟುಂಬದ ವರ್ಗದವರು ಸದರಿಯವರು ಬಡವರು ಮತ್ತು ಅಂಗವಿಕಲತೆಯುಳ್ಳ ಮಗನಿರುವುದರಿಂದ ದಿನಾಂಕ:25-08-2021ರವರೆಗೆ ಕಟ್ಟಡವನ್ನು ತೆರವುಗೊಳಿಸಬಾರದೆಂದು ನಂತರ ಒತ್ತುವರಿ ತೆರವುಗೊಳಿಸಲು ಯಾವುದೇ ತಂಟೆ ತಕರಾರು ಇರುವುದಿಲ್ಲವೆಂದು ಕೋರಿದ್ದನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸಿದ್ದು, ದಿನಾಂಕ:29-08-2021ರಂದು ಪೊಲೀಸ್ ಸಿಬ್ಬಂದಿಯೊಂದಿಗೆ ಒತ್ತುವರಿ ಜಾಗವನ್ನು ತೆರವುಗೊಳಿಸಲು ಹೋದಾಗ ಹೊನ್ನಯ್ಯ ಇವರ ಪತ್ನಿ ಶ್ರೀಮತಿ ಹೊಂಬಾಳಮ್ಮ ಇವರು ತೆರವುಗೊಳಿಸಲು ಅಡ್ಡಿ ಉಂಟು ಮಾಡಿದ್ದು, ಸದರಿಯವರನ್ನು ಮನೆಯೊಳಗೆ ಕೂಡಿದ್ದು ಶ್ರೀಮತಿ ಹೊಂಬಾಳಮ್ಮ ಇವರು ವಿಷ ಕುಡಿಯುತ್ತಿರುವ ಮಾಹಿತಿಯನ್ನು ಅಕ್ಕಪಕ್ಕದವರು ಕಿಟಕಿಯಿಂದ ಗಮನಿಸಿ ಪೊಲೀಸರಿಗೆ ತಿಳಿಸಿದಾಗ, ಪೊಲೀಸರು ಮನೆಯೊಳಗೆ ಹೋಗಿ ಶ್ರೀಮತಿ ಹೊಂಬಾಳಮ್ಮ ಇವರನ್ನು ಹೊರಗಡೆ ಕರೆದುಕೊಂಡು ಬಂದಿದ್ದು ಸದರಿಯವರನ್ನು ತುರ್ತುವಾಹನದಲ್ಲಿ ಆಸ್ಪತ್ರೆಗೆ ಹೋಗಲು ಸೂಚಿಸಿ, ಗ್ರಾಮದಲ್ಲಿ ಬಿಗುವಿನ ವಾತಾವರಣ ಇದ್ದ ಕಾರಣ ತೆರವು ಕಾರ್ಯಾಚರಣೆಯನ್ನು ನಿಲ್ಲಿಸಲಾಯಿತು ಎಂದು ನುಡಿದಿರುತ್ತಾರೆ. ಸದರಿ ಸ್ವತ್ತಿಗೆ ಅಡಿಷನ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನಾಗಮಂಗಲ ನ್ಯಾಯಾಲಯದಿಂದ ಯಥಾಸ್ಥಿತಿ ಕಾಪಾಡಲು ಆದೇಶವಾಗಿರುವುದರಿಂದ ಸಂಬಂಧಪಟ್ಟ ಸ್ವತ್ತಿಗೆ ತಡೆಯಾಜ್ಞೆ ತೆರವುಗೊಂಡ ನಂತರ ಮನೆ ಒತ್ತುವರಿ ತೆರವು ಕಾರ್ಯಾಚರಣೆ ಮಾಡಿ ವರದಿಯನ್ನು ಸಲ್ಲಿಸಲು ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ.

**4. ಒಟ್ಟಾರೆ ಅಭಿಪ್ರಾಯ:**

ದೂರುದಾರರು ಆಪಾದಿಸಿರುವ ಅಂಶ ಹಾಗೂ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ಮಾಯಣ್ಣ ಮತ್ತು ಇತರರು ನಾಗಮಂಗಲ ನ್ಯಾಯಾಲಯದಲ್ಲಿ ಸಲ್ಲಿಸಿರುವ ಓ.ಎಸ್. ನಂ.122/2019 ಇವುಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ಶ್ರೀ ಹೆಚ್.ಸಿ. ಮಾಯಣ್ಣ ಇವರು ಈಗಾಗಲೇ ಹೊನ್ನಯ್ಯ ಬಿನ್ ಗಂಟಯ್ಯ ಇವರು ಅಕ್ರಮವಾಗಿ ರಸ್ತೆ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡುತ್ತಿರುವ ಕುರಿತು ದೂರು ಸಲ್ಲಿಸಿರುವುದಾಗಿ 1ನೇ ಎದುರುದಾರರು ಒಪ್ಪಿಕೊಂಡಿರುತ್ತಾರೆ.

2) 1ನೇ ಎದುರುದಾರರು ಹೆಚ್.ಸಿ. ಮಾಯಣ್ಣ ಇವರು ಯಾವ ದಿನಾಂಕದಂದು ದೂರು ಕೊಟ್ಟಿರುತ್ತಾರೆಂಬ ಮಾಹಿತಿಯನ್ನು ತಿಳಿಸಿರುವುದಿಲ್ಲ.

3) ಹೊನ್ನಯ್ಯ ಇವರು ಕಟ್ಟಡ ಕಟ್ಟುವ ಸಂಬಂಧ ಲೈಸೆನ್ಸ್ ಪಡೆಯದೇ ಕಟ್ಟಡ ಕಟ್ಟುತ್ತಿರುವುದನ್ನು 1ನೇ ಎದುರುದಾರರು ಸ್ಥಳಕ್ಕೆ ಭೇಟಿ ನೀಡಿ ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸುವ ಕ್ರಮವನ್ನು ಕೈಗೊಂಡಿರುವುದಿಲ್ಲ.

4) ಹೊನ್ನಯ್ಯ ಇವರು 2 ಅಡಿಗಳ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟುತ್ತಿರುವುದನ್ನು 1ನೇ ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಒಪ್ಪಿಕೊಂಡಿರುತ್ತಾರೆ.

5) ಅಕ್ರಮವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟುತ್ತಿರುವುದನ್ನು ನಿಯಮಾನುಸಾರ ತೆರವುಗೊಳಿಸುವ ಕಾರ್ಯವನ್ನು 1ನೇ ಮತ್ತು 2ನೇ ಎದುರುದಾರರು ಹೊಂದಿರುತ್ತಾರೆ.

6) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒತ್ತುವರಿಯನ್ನು ತೆರವುಗೊಳಿಸುವ ಪ್ರಾಧಿಕಾರವು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೇರಿರುವುದರಿಂದ ಪ್ರಾಧಿಕಾರದಿಂದ ವಿಚಾರಣೆ ನಡೆಸಿ ಒತ್ತುವರಿ ತೆರವುಗೊಳಿಸಬೇಕಾಗಿದ್ದು ಕೋವೀಡ್–19 ಮತ್ತು ಇತರೆ ಕೆಲಸದ ಒತ್ತಡದಿಂದ ವಿಚಾರಣೆ ಪ್ರಾರಂಭಿಸಿರುವುದಿಲ್ಲ ಎಂಬ ಅಂಶವನ್ನು ಒಪ್ಪಿಕೊಂಡಿರುವುದರಿಂದ 2ನೇ ಎದುರುದಾರರು ತಪ್ಪು ಮಾಡಿರುವುದನ್ನು ಖುದ್ದು ಒಪ್ಪಿಕೊಂಡಿರುತ್ತಾರೆ.

7) 1ನೇ ಮತ್ತು 2ನೇ ಎದುರುದಾರರು ಪೋಲೀಸರ ನೆರವಿನೊಂದಿಗೆ ತೆರವುಗೊಳಿಸಲು ಕಷ್ಟಸಾಧ್ಯವಾಗಿರುವುದನ್ನು ನ್ಯಾಯಾಲಯದ ಮುಖಾಂತರ ಕೈಗೊಂಡು ಸರ್ಕಾರಿ ಜಾಗವನ್ನು ಪಂಚಾಯಿತಿ ಸುಪರ್ದಿಗೆ ತೆಗೆದುಕೊಳ್ಳಬೇಕಾಗಿರುತ್ತದೆ.

8) ನಾಗಮಂಗಲ ನ್ಯಾಯಾಲಯದಲ್ಲಿ ಹೂಡಿರುವ ದಾವೆಯಲ್ಲಿ ಪಂಚಾಯಿತಿ ಅಧಿಕಾರಿ/ತಾಲ್ಲೂಕು ಪಂಚಾಯಿತಿ ಅಧಿಕಾರಿಯವರನ್ನು ಎದುರುದಾರರನ್ನಾಗಿ ಮಾಡಿರುವುದಿಲ್ಲ.

9) 1ನೇ ಎದುರುದಾರರು ಮತ್ತು 2ನೇ ಎದುರುದಾರರು ಕೈಗೊಳ್ಳಬೇಕಾದ ಕೆಲಸವನ್ನು ದೂರುದಾರರು ಕೈಗೊಂಡು ನಾಗಮಂಗಲ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.

ದೂರುದಾರರು ದೂರು ಅರ್ಜಿಯಲ್ಲಿ ಆಪಾದಿಸಿದಂತೆ 1ನೇ ಮತ್ತು 2ನೇ ಎದುರುದಾರು ಸಕಾಲದಲ್ಲಿ ಸೂಕ್ತ ಕ್ರಮವನ್ನು ಹೊನ್ನಯ್ಯ ಇವರ ವಿರುದ್ಧ ಕೈಗೊಂಡಿದ್ದರೆ ಸರ್ಕಾರಿ ಜಾಗದ ಒತ್ತುವರಿಯನ್ನು ತೆರವುಗೊಳಿಸಲು ಅವಕಾಶವಿತ್ತು. ಆದರೆ 1ನೇ ಮತ್ತು 2ನೇ ಎದುರುದಾರರು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಹೊನ್ನಯ್ಯ ಇವರು ಅಕ್ರಮವಾಗಿ ಕಟ್ಟಡವನ್ನು ಮುಂದುವರೆಸಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಆದ್ದರಿಂದ ದೂರುದಾರರು ಆಪಾದಿಸಿರುವ ಅಂಶವು ತನಿಖೆಯಲ್ಲಿ ಸಾಬೀತಾಗಿರುತ್ತದೆ.

ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ 1ನೇ ಎದುರುದಾರರಾದ ರಂಗಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕರಡಹಳ್ಳಿ ಗ್ರಾಮ ಪಂಚಾಯಿತಿ, ನಾಗಮಂಗಲ ತಾಲ್ಲೂಕು (ನಿವೃತ್ತಿ ದಿನಾಂಕ:30-04-2023) ಮತ್ತು 2ನೇ ಎದುರುದಾರರಾದ ಶ್ರೀ ಸತೀಶ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನಾಗಮಂಗಲ (ನಿವೃತ್ತಿ ದಿನಾಂಕ:31-03-2041) ಇವರ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

07/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.